ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ.16/ಜಿ, 1ನೇ ಮಹಡಿ, ಮಿಲ್ಲರ್ ಟ್ಯಾಂಕ್ ಬೆಡ್ಡ್ ಏರಿಯಾ, ವಸಂತನಗರ,
ಬೆಂಗಳೂರು- 560 052. ದೂರವಾಣಿ ಸಂಖ್ಯೆ: 080-22380140,22382361/2
ಫ್ಯಾಕ್ಸ : 080 - 49071400

ಸಂ:ಕರಅನಿನಿ/IFB/2017-18/19 ದಿನಾಂಕ:26.07.2017
28

## ವಾಹನಗಳ ವಿಲೇವಾರಿಗಾಗಿ ಬಿಡ್‌ಗಳ ಆಹ್ವಾನ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಹೆಸರಿನಲ್ಲಿ ನೋಂದಾವಣೆಯಾಗಿ ಚಾಲನಾ ಸ್ಥಿತಿಯಲ್ಲಿರುವ ಕೆಳಕಂಡ ವಾಹನಗಳ ವಿಲೇವಾರಿಗಾಗಿ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

| ಕ್ರಸಂ | ವಾಹನ ಮಾದರಿ ಹಾಗೂ ಸಂಖ್ಯೆ | ಖರೀದಿ ವರ್ಷ | ಇಂಧನ |
|---|---|---|---|
| 1 | ಕೆ.ಎ.04- ಎಂ.ಎಫ್ 1625 ಹುಂಡೈ ವರ್ನಾ | 2008 | ಪೆಟ್ರೋಲ್ |
| 2 | ಕೆ.ಎ.04- ಎಂ.ಎಫ್ 1484 ಟಾಟಾ ಇಂಡಿಗೊ | 2008 | ಡೀಸಲ್ |

1. ಆಸಕ್ತ ಬಿಡ್‌ದಾರರು ವಾಹನ ಒಂದಕ್ಕೆ ಟೆಂಡರ್ ಅರ್ಜಿ ಶುಲ್ಕ ರೂ.500.00ಗಳನ್ನು (ಹಿಂದಿರುಗಿಸಲಾಗದ) ರಾಷ್ಟ್ರೀಕೃತ ಬ್ಯಾಂಕ್‌ನಿಂದ ಡಿ.ಡಿ. ರೂಪದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರಅನಿನಿ, ಬೆಂಗಳೂರು ರವರ ಹೆಸರಿಗೆ ಪಡೆದು ಕಛೇರಿಗೆ ಸಲ್ಲಿಸಿ ಅಥವಾ ಕಛೇರಿ ವೇಳೆಯಲ್ಲಿ ನಗದಾಗಿ ಪಾವತಿಸಿ ಖಾಲಿ ಟೆಂಡರ್ ಫಾರಂಗಳನ್ನು ದಿ:31.07.2017ರಿಂದ ಪಡೆಯುವುದು.
2. ಆಸಕ್ತ ಬಿಡ್‌ದಾರರು ಮೇಲ್ಕಂಡ ವಿಳಾಸದಲ್ಲಿ ಕಛೇರಿ ವೇಳೆಯಲ್ಲಿ ಮೇಲಿನ ವಾಹನಗಳನ್ನು ಪರಿಶೀಲಿಸಬಹುದಾಗಿರುತ್ತದೆ.
3. ಆಸಕ್ತ ಬಿಡ್‌ದಾರರು ಭರ್ತಿ ಮಾಡಿದ ಟೆಂಡರ್ ಫಾರಂ ನೊಂದಿಗೆ ಒಂದು ವಾಹನಕ್ಕೆ ರೂ.10,000.00ಗಳಂತೆ ಇ.ಎಂ.ಡಿ. ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ನಿಂದ ಡಿ.ಡಿ. ರೂಪದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರಅನಿನಿ, ಬೆಂಗಳೂರು ಹೆಸರಿಗೆ ಪಡೆದು **ಮುಚ್ಚಿದ ಲಕೋಟೆಯಲ್ಲಿ ಪ್ರತ್ಯೇಕವಾಗಿ** ದಿ:18.08.2017ರ ಮದ್ಯಾಹ್ನ 3.00ಗಂಟೆಯ ಒಳಗೆ ಸಲ್ಲಿಸತಕ್ಕದ್ದು, ಅಂದೇ ಹಾಜರಿರುವ ಬಿಡ್‌ದಾರರ ಸಮ್ಮುಖದಲ್ಲಿ ಬಿಡ್‌ಗಳನ್ನು ತೆರೆಯಲಾಗುವುದು.
4. ಆಯ್ಕೆಯಾದ ಬಿಡ್‌ದಾರರು ಒಂದು ವಾರದ ಒಳಗೆ ನಮೂದಿತ ಬಿಡ್ ಮೊತ್ತದಲ್ಲಿ ಇ.ಎಂ.ಡಿ. ಮೊತ್ತ ಹೊಂದಾಣಿಕೆ ನಂತರ ವ್ಯತ್ಯಾಸದ ಮೊತ್ತ ಪಾವತಿಸಿ ವಾಹನವನ್ನು ಸುಪರ್ದಿಗೆ ಪಡೆಯುವುದು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲುಹಾಕಿಕೊಳ್ಳಲಾಗುವುದು.
5. ಬಿಡ್ ಮೊತ್ತ ಪಾವತಿಸಿ ವಾಹನ ಪಡೆದ ಬಿಡ್‌ದಾರರು 15 ದಿನಗಳ ಒಳಗಾಗಿ ವಾಹನಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳತಕ್ಕದ್ದು.
6. ಭರ್ತಿ ಮಾಡಿ ಸಲ್ಲಿಕೆಯಾಗಿರುವ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಕಾರಣ ನೀಡದೆ ಪರಿಗಣಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು, ಕರಅನಿನಿ ರವರು ಹೊಂದಿರುತ್ತಾರೆ.

28/7/17
ಮುಖ್ಯ ಇಂಜಿನಿಯರ್
ಕರಅನಿನಿ, ಬೆಂಗಳೂರು.